Volume 1, Issue 2 31, August 2025

# E-STREET VOICE

A MONTHLY NEWSLETTER FROM BOSCO BENGALURU

## ನಮ್ಮ ಭರವಸೆಯನ್ನು ಎತ್ತಿಹಿಡಿಯೋಣ- ನಮ್ಮ ಕನಸುಗಳನ್ನು ಅನಾವರಣಗೊಳಿಸೋಣ



National DB YaR Campaign 2025-2026

## ಸಂಪಾದಕೀಯ

# ನಮ್ಮ ಭರವಸೆಯನ್ನು ಎತ್ತಿಹಿಡಿಯೋಣ-ನಮ್ಮ ಕನಸುಗಳನ್ನು ಅನಾವರಣಗೊಳಿಸೋಣ

"ನಮ್ಮ ಭರವಸೆಯನ್ನು ಎತ್ತಿಹಿಡಿಯೋಣ-ನಮ್ಮ ಕನಸುಗಳನ್ನು ಅನಾವರಣಗೊಳಿಸೋಣ" ಎಂಬ ಡಾನ್ ಬೊಸ್ಕೊ YaR ಫೋರಂನ ಈ ವರುಷದ ಶೀರ್ಷಿಕೆ ಯುವಜನರ ಮತ್ತು ಮಕ್ಕಳ ರಾಷ್ಟ್ರೀಯ ಅಭಿಯಾನಕ್ಕೆ ಪ್ರಬಲ ಅಡಿಪಾಯವಾಗಿ ನಿಲ್ಲುತ್ತದೆ. ಈ ಉಪಕ್ರಮವು ದುರ್ಬಲ ಮಕ್ಕಳ ಮತ್ತು ಯುವಜನರ ಅಗತ್ಯ ಮತ್ತು ಆಕಾಂಕ್ಷೆಗಳನ್ನು ಈಡೇರಿಸುವ ಮೂಲಕ ಅವರಿಗಾಗಿ ಭವ್ಯ ಭವಿಷ್ಯ ನಿರ್ಮಿಸಲು ಆರಿಸಿಕೊಳ್ಳಲಾಗಿದೆ. ಬೊಸ್ಕೊ ಸಂಸ್ಥೆಯು ಮತ್ತು ಇತರ ಡಾನ್ ಬೊಸ್ಕೊ ಸಂಸ್ಥೆಗಳು, ಮಕ್ಕಳ ಕೇಂದ್ರಿಕೃತ ಕಲಿಕೆಯ ವಾತಾವರಣ, ನಾಯಕತ್ವ ಕೌಶಲ್ಯಗಳನ್ನು ಬೆಳೆಸಲು ಮತ್ತು ಯುವಜನರು ತಮ್ಮ ಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳಲು ಹಾಗೂ ಸಮಾಜಕ್ಕೆ ಅರ್ಥಪೂರ್ಣವಾಗಿ ಕೊಡುಗೆ ನೀಡಲು ಅನೇಕ ಸೃಜನಾತ್ಮಕ ಹಾಗೂ ಆಸಕ್ತಿದಾಯಕ ಕಾರ್ಯಕ್ರಮಗಳನ್ನು ಸಕ್ರಿಯವಾಗಿ ರೂಪಿಸುತ್ತಿವೆ.

ಈ ಅಭಿಯಾನವು ಯುವಜನರಿಗೆ, ವಿಶೇಷವಾಗಿ ಸವಾಲುಗಳನ್ನು ಎದುರಿಸುತ್ತಿರುವವರಿಗೆ, ತಮ್ಮನ್ನು ತಾವೇ ವ್ಯಕ್ತಪಡಿಸಲು ಒಂದು ವೇದಿಕೆ ಕಲ್ಪಿಸಿ ಮತ್ತು ಅವರನ್ನು ಪರಿಣಾಮಕಾರಿ ನಾಯಕರನ್ನಾಗಿ ರೂಪಿಸಿ ಹಾಗೂ ಅವರ ಕಾರಣಗಳಿಗಾಗಿ ಪ್ರತಿಪಾದಿಸುವ ಸಾಧನಗಳನ್ನು ಒದಗಿಸುವ ಮೂಲಕ ಅಧಿಕಾರ ನೀಡುವ ಗುರಿಯನ್ನು ಹೊಂದಿದೆ. ಮಕ್ಕಳ ಕೇಂದ್ರೀಕೃತ ಕಲಿಕೆಯ ವಿಧಾನದ ಮೂಲಕ ಅಗತ್ಯ ನಾಯಕತ್ವದ ಗುಣಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಈ ಉಪಕ್ರಮವು ಸಕಾರಾತ್ಮಕ ಬದಲಾವಣೆಗೆ ಅಡಿಪಾಯವಾಗಿರುತ್ತದೆ.

ಯುವಜನರು ಬೆಳೆಯಲು ಪೂರಕವಾದ ಪರಿಸರ ವ್ಯವಸ್ಥೆಯನ್ನು ಬೆಳೆಸಲು ಶಿಕ್ಷಣ ಸಂಸ್ಥೆಗಳು, ಸರ್ಕಾರೇತರ ಸಮಾಜ ಸೇವಾ ಸಂಸ್ಥೆಗಳು ಮತ್ತು ಸರ್ಕಾರಿ ಸಂಸ್ಥೆಗಳು ಸೇರಿದಂತೆ ಹಲವಾರು ಪಾಲುದಾರರನ್ನು ಸಕ್ರಿಯವಾಗಿ ಈ ಆಂದೋಲನವು ಒಳಗೊಂಡಿರುತ್ತದೆ. ಈ ಉಪಕ್ರಮವು ಯುವಜನರ ಕನಸುಗಳನ್ನು ಬೆಳೆಸುವ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ ಹಾಗೂ ಅವರ ಬೆಳವಣಿಗೆಗೆ ಅನುಕೂಲವಾಗುವ ನೀತಿಗಳಿಗಾಗಿ ಪ್ರತಿಪಾದಿಸುತ್ತದೆ. ಈ ಶೀರ್ಷಿಕೆ ಯುವಜನರು ದೊಡ್ಡ ಕನಸು ಕಾಣಲು, ಅವರ ಸಾಮರ್ಥ್ಯವನ್ನು ಬಳಸಿಕೊಳ್ಳಲು ಹಾಗೂ ಅವರ ಆಕಾಂಕ್ಷೆಗಳನ್ನು ನಿಜವಾಗಿಸಲು ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಲು ಸಹಕರಿಸುತ್ತದೆ.

"ನಮ್ಮ ಭರವಸೆಯನ್ನು ಎತ್ತಿಹಿಡಿಯೋಣ-ನಮ್ಮ ಕನಸುಗಳನ್ನು ಅನಾವರಣಗೊಳಿಸೋಣ" ಎಂಬ ಶೀರ್ಷಿಕೆ ಸೂಕ್ತವಾದ ಬೆಂಬಲ ಮತ್ತು ಅವಕಾಶಗಳೊಂದಿಗೆ, ಯುವಜನರು ಭರವಸೆಯ ಭವಿಷ್ಯವನ್ನು ರೂಪಿಸುವ ಸಾಮರ್ಥ್ಯ ಹೊಂದಿದ್ದಾರೆ ಎಂಬ ನಂಬಿಕೆಯ ಮೇಲೆ ಆಧಾರವಾಗಿದೆ. ಈ ನೀತಿಯು ಕೈಲಾಶ್ ಸತ್ಯಾರ್ಥಿಯಂತಹ ಮಾನವ ಹಕ್ಕುಗಳ ಹೋರಾಟಗಾರರು ಹಾಗೂ ಚಿಂತನಾಕಾರರ ದೃಷ್ಟಿಕೋನದೊಂದಿಗೆ ಹೊಂದಿಕೊಳ್ಳುತ್ತದೆ. ಭಾರತದ ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಮ್ ಅವರ ಸ್ಫೂರ್ತಿದಾಯಕ ಸಂದೇಶವು "ಕನಸು ಕಾಣಿರಿ, ಕನಸು ಕಾಣಿರಿ, ಕನಸು ಕಾಣಿರಿ", ಕೂಡಾ ಈ ಭಾವನೆಯನ್ನು ಬಲಪಡಿಸುತ್ತದೆ.
ನಮ್ಮ ಸಮಾಜದಲ್ಲಿ ಶಾಶ್ವತವಾದ ಸಕಾರಾತ್ಮಕ ಬದಲಾವಣೆಯನ್ನು ಸೃಷ್ಟಿಸಲು ನಾವೆಲ್ಲಾ ಜೊತೆಗೂಡಿ ನಮ್ಮ ಮುಂದಿನ ಪೀಳಿಗೆಗೆ ಭರವಸೆಯನ್ನು ಹುಟ್ಟುಹಾಕಬಹುದು ಮತ್ತು ಅವರನ್ನು ಸಶಕ್ತಗೊಳಿಸಬಹುದು.



**K.J Joseph**
**Director, BNRD**

# ವರಮಹಾಲಕ್ಷ್ಮಿ ಹಬ್ಬದ ಆಚರಣೆ





ಆಗಸ್ಟ್ 8, 2025 ರಂದು ಬೊಸ್ಕೊ ವಾತ್ಸಲ್ಯ ಭವನ ಮತ್ತು ಬೊಸ್ಕೊ ರೇನ್ಬೋ ಹೋಮ್ ವರಮಹಾಲಕ್ಷ್ಮಿ ಹಬ್ಬವನ್ನು ತಮ್ಮ ಕೇಂದ್ರಗಳಲ್ಲಿ ಬಹಳ ಉತ್ಸಾಹ ಮತ್ತು ಭವ್ಯತೆಯಿಂದ ಆಚರಿಸಿದರು. ಮಕ್ಕಳು ವರಲಕ್ಷ್ಮಿ ಪ್ರತಿಮೆಯನ್ನು ಸೃಜನಾತ್ಮಕವಾಗಿ ಅಲಂಕರಿಸಿ ಅವರ ನಂಬಿಕೆ, ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಸುಂದರವಾಗಿ ವ್ಯಕ್ತಪಡಿಸಿದರು. ರಂಗುರಂಗಿನ ಹಬ್ಬದ ಉಡುಪನ್ನು ಧರಿಸಿ, ಭಕ್ತಿ ಮತ್ತು ಗೌರವದಿಂದ ದೇವಿಗೆ ಹೃತ್ಪೂರ್ವಕ ಪ್ರಾರ್ಥನೆಗಳನ್ನು ಅರ್ಪಿಸಿದರು.

ಬೊಸ್ಕೊ ರೇನ್ಬೋ ಹೋಮ್ ಮಕ್ಕಳನ್ನು ಹತ್ತಿರದ ದೇವಸ್ಥಾನಕ್ಕೆ ಕರೆದೊಯ್ಯಲಾಯಿತು, ಅಲ್ಲಿ ಅವರು ವರಮಹಾಲಕ್ಷ್ಮಿಗೆ ಪೂಜೆ ಅರ್ಪಿಸಿ ಪ್ರಾರ್ಥಿಸಿದರು. ಈ ಅನುಭವವು ಸಂಸ್ಕೃತಿಯ ಬಗ್ಗೆ ಕಲಿಯಲು, ಹಬ್ಬದ ಆಳವನ್ನು ಅನುಭವಿಸಲು ಮತ್ತು ಆಚರಣೆಯನ್ನು ಆನಂದಿಸಲು ಅವರಿಗೆ ಆಸ್ಪದ ಕಲ್ಪಿಸಲಾಯಿತು. ರುಚಿಕರವಾದ ಆಹಾರವನ್ನು ಹಂಚಿಕೊಳ್ಳಲು, ಸಂತೋಷವನ್ನು ಹರಡಲು ಮತ್ತು ಅವರ ಸಮುದಾಯದ ಪ್ರಜ್ಞೆಯನ್ನು ಬಲಪಡಿಸಲು ಮಕ್ಕಳು ಒಗ್ಗೂಡಿದ ಕಾರಣ ಉತ್ಸವಗಳನ್ನು ಮತ್ತಷ್ಟು ಹೆಚ್ಚಿಸಲಾಯಿತು. ಕೇಂದ್ರದಲ್ಲಿನ ಎಲ್ಲಾ ಮಕ್ಕಳು, ಸಿಬ್ಬಂದಿಯವರೊಂದಿಗೆ ಜೊತೆಗೂಡಿ ಆಚರಣೆಯಲ್ಲಿ ಭಕ್ತಿ-ಶ್ರದ್ಧೆಯಿಂದ ಭಾಗವಹಿಸಿದರು.

# ಅಂತಾರಾಷ್ಟ್ರೀಯ ಯುವ ದಿನ







ಅಂತಾರಾಷ್ಟ್ರೀಯ ಯುವ ದಿನವನ್ನು 2025ರ ಆಗಸ್ಟ್ 12ರಂದು ಬೊಸ್ಕೊ ನಿವಾಸ್, ಯುವಸ್ಪಂದನ ಮತ್ತು ಯುವಕೇಂದ್ರಗಳಲ್ಲಿ ಮತ್ತು ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ಆಚರಿಸಲಾಯಿತು. ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾನಿಲಯದಲ್ಲಿ 'ನೀವು ಜಗತ್ತಿನಲ್ಲಿ ನೋಡಲು ಬಯಸುವ ಬದಲಾವಣೆಯಾಗಿರಿ' ಎಂಬ ಅಧಿವೇಶನವು ಸಮಾಜದಲ್ಲಿ ಸಕಾರಾತ್ಮಕ ಪರಿಣಾಮವನ್ನು ಸೃಷ್ಟಿಸಲು ಮತ್ತು ವೈಯಕ್ತಿಕ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಯುವಕರನ್ನು ಪ್ರೇರೇಪಿಸುವ ಗುರಿಯನ್ನು ಹೊಂದಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಬೊಸ್ಕೊ ಸಂಸ್ಥೆಯ ಪ್ರೋಜೆಕ್ಟ್ ಮ್ಯಾನೆಜರ್ ಆದ ಫಾ. ದೀಪು ಪ್ರಾಮಾಣಿಕತೆ, ಸಹಾನುಭೂತಿ ಮತ್ತು ಸೇವೆಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಮತ್ತು ಉತ್ತಮ ಸಮುದಾಯ ನಿರ್ಮಾಣಕ್ಕೆ ಸಕ್ರಿಯವಾಗಿ ಕೊಡುಗೆ ನೀಡುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು.

ಯುವಸ್ಪಂದನದಲ್ಲಿ ಅಂತರರಾಷ್ಟ್ರೀಯ ಯುವ ದಿನ ಮತ್ತು ಅದರ ಪ್ರಾಮುಖ್ಯತೆಯ ಪರಿಚಯದೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಯಾರನ್ನು ಯುವಜನರು ಎಂದು ಪರಿಗಣಿಸಲಾಗುತ್ತದೆ ಎಂಬುದನ್ನು ಸಂಪನ್ಮೂಲ ವ್ಯಕ್ತಿಯು ವಿವರಿಸಿದರಲ್ಲದೆ ಯುವಜನರು ತಾವು ನಿಭಾಯಿಸಬೇಕಾದ ಹೊಣೆ ಮತ್ತು ಅವಕಾಶಗಳ ಬಗ್ಗೆ ಚರ್ಚಿಸಿದರು. ತದ ನಂತರ ಸಂವಾದಾತ್ಮಕ ಚರ್ಚೆಗಳನ್ನು ನಡೆಸಲಾಯಿತು, ಅಲ್ಲಿ ಭಾಗವಹಿಸುವವರು ಸಮಾಜಕ್ಕೆ ಹೇಗೆ ಕೊಡುಗೆ ನೀಡಬಹುದು ಎಂಬುದರ ಕುರಿತು ತಮ್ಮ ಆಲೋಚನೆ ಮತ್ತು ಅಭಿಪ್ರಾಯಗಳನ್ನು ಹಂಚಿಕೊಂಡರು. ಈ ಅಧಿವೇಶನದಲ್ಲಿ ನಾಯಕತ್ವ, ಜವಾಬ್ದಾರಿ ಮತ್ತು ಸ್ವಯಂ ಅರಿವಿನಂತಹ ಅಂಶಗಳ ಬಗ್ಗೆ ಅರಿವು ಮೂಡಿಸಲಾಯಿತಲ್ಲದೆ ಜೊತೆಗೆ ವೈಯಕ್ತಿಕ ಬೆಳವಣಿಗೆ ಮತ್ತು ಸಮುದಾಯ ಅಭಿವೃದ್ಧಿಯತ್ತ ಸಣ್ಣ ಹೆಜ್ಜೆಗಳನ್ನು ಇಡಲು ಯುವಜನರನ್ನು ಪ್ರೋತ್ಸಾಹಿಸಲಾಯಿತು.

ಬೊಸ್ಕೊ ಯುವಕೇಂದ್ರದಲ್ಲಿ ಈ ಅಧಿವೇಶನವನ್ನು ಯುನಿಸೆಫ್ ನೆರವು ತಂಡದ ಶ್ರೀಮತಿ ಪ್ರಿಯಾಂಕಾ ಮತ್ತು ಶ್ರೀ ಗಿರೀಶ್ ಅವರು ಯುವಜನರು ಎದುರಿಸುತ್ತಿರುವ ವಿವಿಧ ವಿಷಯಗಳಾದ ಮಾದಕ ವ್ಯಸನ, ಭಾವನಾತ್ಮಕ ಮತ್ತು ದೈಹಿಕ ಕಿರುಕುಳ, ಧೂಮಪಾನ ಮತ್ತು ಮದ್ಯ ಸೇವನೆಯ ಬಗ್ಗೆ ಚರ್ಚಿಸಿದರು. ಯುವಜನರ ಸಬಲೀಕರಣ ಮತ್ತು ಸಕಾರಾತ್ಮಕ ಜೀವನ ಮೌಲ್ಯಗಳನ್ನು ಎತ್ತಿ ಹಿಡಿಯಲು ಯುವಜನರು ಪ್ರತಿಜ್ಞೆ ಮಾಡಿದರು.

# ಬೊಸ್ಕೊದಲ್ಲಿ ಸ್ವಾತಂತ್ರ್ಯ ದಿನಾಚರಣೆ

79 ನೇ ಸ್ವಾತಂತ್ರ್ಯ ದಿನವನ್ನು ಆಗಸ್ಟ್ 15, 2025 ರಂದು ಬೊಸ್ಕೊ ಕೇಂದ್ರಗಳಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕಾರ್ಯಕಾರಿ ನಿರ್ವಾಹಕರಾದ ಫಾ. ವರ್ಗೀಸ್ ಪಲ್ಲಿಪುರಂ, ಆಯಾ ಕೇಂದ್ರದ ನಿರ್ದೇಶಕರು, ರಸಪಾಕಾ ಹೋಟೆಲ್ ಮಾಲೀಕರಾದ ಶ್ರೀಮತಿ ರೂಪಾ ಶಾಸ್ತ್ರಿ, ಕೆಪಿ ಅಗ್ರಹಾರ ಪೋಲೀಸ್ ಠಾಣೆಯ ಇನ್ಸ್ಪೆಕ್ಟರ್ ಮತ್ತು ಮಾನವ ಹಕ್ಕುಗಳ ಉಪಾಧ್ಯಕ್ಷರಾದ ಶ್ರೀಮತಿ ಗಿರಿಜಾರವರು ಉಪಸ್ಥಿತರಿದ್ದರು. ನಿರ್ದೇಶಕರು ಧ್ವಜಾರೋಹಣ ಮಾಡಿ ಮಕ್ಕಳಿಗೆ ಸ್ಪೂರ್ತಿದಾಯಕ ಸಂದೇಶಗಳನ್ನು ನೀಡಿದರು. ಸ್ವಾತಂತ್ರ್ಯದ ಮಹತ್ವ ಸ್ವಾತಂತ್ರ್ಯ ದಿನದ ನಿಜವಾದ ಅರ್ಥವನ್ನು ಎತ್ತಿ ತೋರಿಸಿದರು. ಮಹಾತ್ಮಾ ಗಾಂಧಿಯವರನ್ನು ಉಲ್ಲೇಖಿಸಿ, "ನೀವು ಜಗತ್ತಿನಲ್ಲಿ ನೋಡಲು ಬಯಸುವ ಬದಲಾವಣೆಯಾಗಿರಿ" ಎಂದು ಸ್ವಾತಂತ್ರ್ಯ, ಜವಾಬ್ದಾರಿ ಮತ್ತು ಯುವ ಸಬಲೀಕರಣದ ಮಹತ್ವವನ್ನು ಒತ್ತಿ ಹೇಳಿದರು.

ಮಕ್ಕಳು ದೇಶಭಕ್ತಿಯ ಹಾಡುಗಳನ್ನು ಹಾಡಿದರು ಮತ್ತು ವಿವಿಧ ನೃತ್ಯ, ನೃತ್ಯ ರೂಪಕಗಳ ಮೂಲಕ ತಮ್ಮ ಪ್ರತಿಭೆಗಳನ್ನು ಅನಾವರಣಗೊಳಿಸಿದರು. ಅಂದಿನ ಕಾರ್ಯಕ್ರಮದಲ್ಲಿ ಡ್ರಾಯಿಂಗ್ ಸ್ಪರ್ಧೆ, ಬ್ಯಾಂಡ್ ಪ್ರದರ್ಶನ, ನೃತ್ಯ, ಕಥೆ ಹೇಳುವಿಕೆ, ಮಿಮಿಕ್ರಿ, ಸ್ಕಿಟ್ ಮತ್ತು ಸ್ವಾತಂತ್ರ್ಯ ದಿನದ ವಿಷಯದ ಮೇಲೆ ಕೇಂದ್ರಿಕೃತವಾಗಿರುವ ನಾಟಕಗಳು ಇದ್ದವು. ಮಕ್ಕಳು ರಾಷ್ಟ್ರಭಕ್ತಿಯ ಸಂಕೇತವಾಗಿ ರಾಷ್ಟ್ರೀಯ ಧ್ವಜದ ಮೂರು ಬಣ್ಣಗಳೊಂದಿಗೆ ತಮ್ಮ ಮುಖಗಳನ್ನು ಚಿತ್ರಿಸಿಕೊಂಡು ಆನಂದಿಸಿದರು. ಹೆಚ್ಚುವರಿಯಾಗಿ, ವಾಲಿಬಾಲ್, ಕ್ರಿಕೆಟ್, ಫುಟ್‌ಬಾಲ್ ಸೇರಿದಂತೆ ಮನರಂಜನಾ ಆಟಗಳನ್ನೂ ಆಡಿಸಲಾಯಿತು. ಕೊನೆಗೆ, ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು.

ಇದರ ಜೊತೆಗೆ, ಸ್ಕೂಲ್ ಬ್ಯಾಗ್, ಪುಸ್ತಕ, ಪೆನ್ನು ಮತ್ತು ಪೆನ್ಸಿಲ್‌ಗಳಂತಹ ಅಗತ್ಯ ಶಾಲಾ ಸರಬುರಾಜುಗಳನ್ನು ಅಧ್ಯಯನ ಕೇಂದ್ರದ ಮಕ್ಕಳಿಗೆ ಒದಗಿಸಲಾಯಿತು. ಇದಲ್ಲದೆ ಶ್ರೀಮತಿ ರೂಪಾ ಶಾಸ್ತ್ರಿಯು ಭವ್ಯ ಭೋಜನವನ್ನು ಪ್ರಾಯೋಜಿಸಿದರು. ಈ ಸಂದರ್ಭದಲ್ಲಿ ಡಿಜಿಟಲ್ ಪೋಸ್ಟರನ್ನು ಎಲ್ಲಾ ನೆಟ್‌ವರ್ಕ್ ಗುಂಪುಗಳು, ಭಾಗಿದಾರರು ಮತ್ತು ಸ್ನೇಹಿತರೊಂದಿಗೆ ಸಾಮಾಜಿಕ ಮಾಧ್ಯಮಗಳ ಮೂಲಕ ಹಂಚಿಕೊಳ್ಳಲಾಯಿತು. ಎಲ್ಲಾ ಕೇಂದ್ರದ ಮಕ್ಕಳು, ಸಮುದಾಯದ ಮಕ್ಕಳು, ಅಧ್ಯಯನ ಕೇಂದ್ರದ ಮಕ್ಕಳು ಮತ್ತು ಬೊಸ್ಕೊದ ಸಿಬ್ಬಂದಿ ಆಚರಣೆಯದಲ್ಲಿ ಭಾಗಯಾಗಿದ್ದರು.








# ಸಂತ ಬೊಸ್ಕೊ ರವರ ಜನ್ಮದಿನಾಚರಣೆ

ಸಂತ ಬೊಸ್ಕೊ ರವರ 210 ನೇ ಹುಟ್ಟುಹಬ್ಬವನ್ನು ಆಗಸ್ಟ್ 16, 2025 ರಂದು ಬೊಸ್ಕೊ ಕೇಂದ್ರಗಳಲ್ಲಿ ಆಚರಿಸಲಾಯಿತು. ನಿರ್ದೇಶಕರು ಮಕ್ಕಳೊಂದಿಗೆ ಡಾನ್ ಬೊಸ್ಕೊ ಪ್ರತಿಮೆಗೆ ಹೂಮಾಲೆ ಹಾಕಿದರು. ನಿರ್ದೇಶಕರು ಮತ್ತು ಸಂಯೋಜಕರು ಡಾನ್ ಬೊಸ್ಕೊ ರವರ ಜೀವನ, ಅವರ ಮೌಲ್ಯಗಳು ಮತ್ತು ಅವರು ಪ್ರಸ್ತಾಪಿಸಿದ ಶಿಕ್ಷಣ ವ್ಯವಸ್ಥೆಯ ಬಗ್ಗೆ ಮಾತನಾಡಿದರು. ದಯೆ ಮತ್ತು ಪೂರ್ವಭಾವಿ ಒಳ್ಳೆಯತನವನ್ನು ಉತ್ತೇಜಿಸುವಾಗ, ಉದಾತ್ತತೆ, ನಮ್ರತೆ ಮತ್ತು ಪ್ರೀತಿಯ ಮಾರ್ಗವನ್ನು ಅನುಸರಿಸಲು ಮಕ್ಕಳನ್ನು ಪ್ರೋತ್ಸಾಹಿಸಲಾಯಿತು. "ಆಟ ಆಡಿರಿ, ಜಿಗಿಯಿರಿ ಮತ್ತು ಓಡಿರಿ, ಆದರೆ ಪಾಪ ಮಾಡಬೇಡಿ" ಎಂಬ ಮಾರ್ಗದರ್ಶಿ ಸೂತ್ರವನ್ನು ನೈತಿಕತೆ, ಸಂತೋಷದ ಜೊತೆಗೆ ಹೇಗೆ ಸಮತೋಲಿಸಬೇಕು ಎಂಬುದರ ಬಗ್ಗೆ ಹೇಳಿಕೊಡಲಾಯಿತು. ಎಲ್ಲರೂ ಪ್ರಾರ್ಥಿಸಿ ಡಾನ್ ಬೊಸ್ಕೊರವರ ಬಗ್ಗೆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿದರು. ಕೊನೆಗೆ ಕೇಕ್ ಕತ್ತರಿಸಿದ ನಂತರ ಉಪಹಾರ ಸೇವಿಸುವುದರ ಮೂಲಕ ಮುಕ್ತಾಯಗೊಳಿಸಲಾಯಿತು. ಎಲ್ಲ ಮಕ್ಕಳು ಮತ್ತು ಸಿಬ್ಬಂದಿಗಳು ಸಂತರ ಹುಟ್ಟುಹಬ್ಬದ ಉತ್ಸವದಲ್ಲಿ ಭಾಗವಹಿಸಿದ್ದರು.





# ಅಧ್ಯಯನ ಕೇಂದ್ರದ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮ



ಬೊಸ್ಕೊ ಯುವೋದಯದಲ್ಲಿ ಅಧ್ಯಯನ ಕೇಂದ್ರದ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮವನ್ನು ಆಗಸ್ಟ್ 23, 2025 ರಂದು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಗಮನವು ಪರಿಣಾಮಕಾರಿಯಾದ ಬೋಧನಾ ತಂತ್ರಗಳು, ಮಕ್ಕಳ ಕೇಂದ್ರಿಕೃತ ಕಲಿಕೆಯ ವಿಧಾನ, ಸಮುದಾಯದೊಳಗಿನ ನಾಯಕತ್ವ ಗುಣಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದಾಗಿತ್ತು. ಬೊಸ್ಕೊ ಯುವೋದಯದ ನಿರ್ದೇಶಕರಾದ ಫಾ. ಜಾನ್ಸನ್ ರವರು ಎಲ್ಲರನ್ನು ಉದ್ದೇಶಿಸಿ, ಅಧ್ಯಯನ ಕೇಂದ್ರದ ಉದ್ದೇಶ, ಮಕ್ಕಳ ಸ್ನೇಹಿ ವಾತಾವರಣವನ್ನು ಹೇಗೆ ರಚಿಸುವುದು ಮತ್ತು ಕಡಿಮೆ ಸವಲತ್ತು ಹೊಂದಿರುವ ಸಮುದಾಯಗಳಲ್ಲಿ ಮಕ್ಕಳಿಗೆ ಶಿಕ್ಷಣ ಒದಗಿಸುವ ಮಹತ್ವದ ಬಗ್ಗೆ ತಿಳಿಸಿಕೊಟ್ಟರು. ಅಂತಹ ಮಕ್ಕಳಿಗೆ ಹೆಚ್ಚಿನ ಪ್ರೀತಿ, ತಾಳ್ಮೆ ಮತ್ತು ದಯೆ ತೋರಿಸುವಂತೆ ಅವರು ಒತ್ತಿ ಹೇಳಿದರು.

ಕಾರ್ಯಕಾರಿ ನಿರ್ವಾಹಕರಾದ ಫಾ. ವರ್ಗೀಸ್ ಪಲ್ಲಿಪುರಂರವರು ಮಕ್ಕಳಿಗೆ ಓದುವ ಅಭ್ಯಾಸವನ್ನು ಬೆಳೆಸಲು ಪ್ರೋತ್ಸಾಹಿಸಬೇಕೆಂದು ಹೇಳಿದರು. ಇದರಿಂದ ಮಕ್ಕಳ ಆತ್ಮವಿಶ್ವಾಸ ಮತ್ತು ಅವರ ಶೈಕ್ಷಣಿಕ ಕೌಶಲ್ಯಗಳು ಹೆಚ್ಚುತ್ತವೆ ಎಂದು ಅವರು ಅಭಿಪ್ರಾಯಪಟ್ಟರು. ಉತ್ತಮ ನೈತಿಕ ಮೌಲ್ಯಗಳನ್ನು ತುಂಬಲು ಹಾಗೂ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಮಕ್ಕಳಿಗೆ ತಿಳಿಸಲು ಅವರು ಶಿಕ್ಷಕರಿಗೆ ಸಲಹೆ ನೀಡಿದರು. ಪ್ರೋಗ್ರಾಮ್ ಮ್ಯಾನೆಜರ್ ಧಾರವಾಡದ ಶಿಕ್ಷಣ ತಜ್ಞರಾದ ಡಾ. ಸುರೇಶ್ ಕುಲಕರ್ಣಿ ಒಳಗೊಂಡ ಪ್ರೇರಕ ವೀಡಿಯೊಗಳನ್ನು ಪ್ರಸ್ತುತಪಡಿಸಿದರು. ತರಬೇತಿಯಲ್ಲಿ ಬೊಸ್ಕೊದ ಮಾನವ ಸಂಪನ್ಮೂಲ ನೀತಿಯನ್ನು ಸಹ ವಿವರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಹದಿನಾರು ಅಧ್ಯಯನ ಕೇಂದ್ರದ ಶಿಕ್ಷಕರು ಭಾಗವಹಿಸಿದ್ದರು.

# ಆರೈಕೆ ನಿರೀಕ್ಷಿತ ಪೋಷಕರ ಸಭೆ

ಬೆಂಗಳೂರಿನ ಬೊಸ್ಕೊ ಮನೆಯಲ್ಲಿ ಜಿಲ್ಲಾ ಮಕ್ಕಳ ಸಂರಕ್ಷಣಾ ಅಧಿಕಾರಿಗಳ (ಡಿಸಿಪಿಓ) ಸಹಯೋಗದೊಂದಿಗೆ ಬೊಸ್ಕೊ ಫೊಸ್ಟರ್ ಕೇರ್ ಯೋಜನೆಯು ಆರೈಕೆ ನಿರೀಕ್ಷಿತ ಪೋಷಕರ ಸಭೆಯನ್ನು ಆಗಸ್ಟ್ 30, 2025 ರಂದು ಆಯೋಗಿಸಿತ್ತು. ಕಾರ್ಯಕ್ರಮವು ಎಲ್ಲಾ ಗಣ್ಯರು ದೀಪ ಬೆಳಗುವುದರೊಂದಿಗೆ ಪ್ರಾರಂಭವಾಯಿತು. ಹಾಗೂ ಈ ಕಾರ್ಯಕ್ರಮದಲ್ಲಿ 2024-25 ರ ಸಾಲಿನ ಬೊಸ್ಕೊ ವಾರ್ಷಿಕ ವರದಿಯನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕಾರಿ ನಿರ್ವಾಹಕರಾದ ಫಾ. ವರ್ಗೀಸ್ ಪಲ್ಲಿಪುರಂ ರವರು ಮಕ್ಕಳನ್ನು ಬೆಳೆಸಲು ಮುಂದೆ ಬಂದ ಎಲ್ಲಾ ನಿರೀಕ್ಷಿತ ಪೋಷಕರಿಗೆ ಹೃತ್ಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಪೋಷಕರು ನೆನಪಿನಲ್ಲಿಟ್ಟುಕೊಳ್ಳಲು ಅವರು ಕಲವು ಪ್ರಮುಖ ಅಂಶಗಳನ್ನು ಹಂಚಿಕೊಂಡರು.



ಒಂದು ಉದಾಹರಣೆಯನ್ನು ಉಲ್ಲೇಖಿಸಿ ಡಿಸಿಪಿಓ (ಸೆಂಟ್ರಲ್, ಬೆಂಗಳೂರು) ಶ್ರೀಮತಿ ಲೀನಾ ಕಲ್ಲಮ್ಮನವರ್, "ಬೇರು ಸಹಿತ ಹಾಗೂ ಮರುಸಂಗ್ರಹಿಸಿದ ಸಸ್ಯವು ಬೆಳೆಯಲು ಮತ್ತು ಹೊಂದಿಕೊಳ್ಳಲು ಸಮಯ ತೆಗೆದುಕೊಳ್ಳುತ್ತದೆ, ಮಕ್ಕಳು ಸಹ ತಮ್ಮ ಹೊಸ ಪರಿಸರ ಮತ್ತು ಕುಟುಂಬಗಳಿಗೆ ಹೊಂದಿಕೊಳ್ಳಲು ಸಮಯ ಬೇಕಾಗುತ್ತದೆ" ಎಂದು ತಿಳಿಸಿದರು. ಕೌಟುಂಬಿಕ ಬೆಂಬಲವಿಲ್ಲದ ಮಕ್ಕಳಿಗೆ ಕಾಳಜಿಯನ್ನು ನೀಡುವ ಮಹತ್ವವನ್ನು ಅವರು ಒತ್ತಿ ಹೇಳಿದರು.

ಕು. ಆಶಾ, ಡಿಸಿಪಿಓ (ದಕ್ಷಿಣ, ಬೆಂಗಳೂರು) ಪೋಷಕತ್ವ ಕಾರ್ಯಕ್ರಮ ಒಳಗೊಂಡಿರುವ ಕಾನೂನು ಕಾರ್ಯವಿಧಾನಗಳ ಬಗ್ಗೆ ಸಂಕ್ಷಿಪ್ತ ಅವಲೋಕನ ಒದಗಿಸಿದರಲ್ಲದೆ ಅದರ ಜೊತೆಗೆ ಪೋಷಕರು ಮತ್ತು ಮಕ್ಕಳಿಗೆ ಪೂರ್ವ ಹಾಗೂ ನಂತರದ ಸಮಾಲೋಚನೆಯ ಪ್ರಾಮುಖ್ಯತೆಯನ್ನು ನೀಡಿದರು. ವಿವಿಧ ವಿಭಾಗಗಳ ಸಂರಂಕ್ಷಣಾ ಅಧಿಕಾರಿಗಳು ಪೋಷಕತ್ವದ ಪರಿಕಲ್ಪನೆ, ಅರ್ಜಿ ಸಲ್ಲಿಸುವ ವಿಧಾನ, ಪೋಷಕರ, ಮಕ್ಕಳ, ಡಿಸಿಪಿಯು ಮತ್ತು ಸಿಡಬ್ಲುಸಿ ಪಾತ್ರಗಳ ಬಗ್ಗೆ ವಿವರವಾಗಿ ಚರ್ಚಿಸಿದರು. ನಿರೀಕ್ಷಿತ ಪೋಷಕರು, ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕದ ಪ್ರತಿನಿಧಿಗಳು, ಬೊಸ್ಕೊ ಸಿಬ್ಬಂದಿ ಸೇರಿದಂತೆ ಒಟ್ಟು 47 ಜನರು ಸಭೆಯಲ್ಲಿ ಭಾಗವಹಿಸಿದ್ದರು.

# ರಾಷ್ಟ್ರೀಯ YaR ದಿನ ಅಭಿಯಾನ





2024-25 ರಾಷ್ಟ್ರೀಯ YaR ಅಭಿಯಾನದ ಸಮಾರೋಪ ಸಮಾರಂಭ, 2025-26 ಅಭಿಯಾನದ ಆನ್ಲೈನ್ ಬಿಡುಗಡೆ ಮತ್ತು YaR ದಿನದ ಆಚರಣೆಯು, "ನಮ್ಮ ಭರವಸೆಯನ್ನು ಎತ್ತಿಹಿಡಿಯೋಣ- ನಮ್ಮ ಕನಸುಗಳನ್ನು ಅನಾವರಣಗೊಳಿಸೋಣ", ಎಂಬ ಶೀರ್ಷಿಕೆ ಅಡಿಯಲ್ಲಿ ಆಗಸ್ಟ್ 30, 2025 ರಂದು ನಡೆಯಿತು. ಉದ್ಘಾಟನಾ ಸಮಾರಂಭದಲ್ಲಿ ನವದೆಹಲಿಯ ಯುನಿಸೆಫ್ ನ ಮಕ್ಕಳ ರಕ್ಷಣಾ ತಜ್ಞೆ ಶ್ರೀಮತಿ ವಿಜಯಲಕ್ಷ್ಮಿ ಅರೋರಾ ಸೇರಿದಂತೆ ಫಾ. ಜೋ ಪ್ರಭು, ನವದೆಹಲಿಯ ಡಿಬಿ YaR ಫೋರಂ ನ ಕಾರ್ಯನಿರ್ವಾಹಕ ನಿರ್ದೇಶಕರು, ಡಿಬಿ ಆಶಾಲಯಮ್ ನ ರೆಕ್ಟರ್ ಮತ್ತು ನಿರ್ದೇಶಕರಾದ ಫಾ. ಮರಿಯಾ ದಾಸ್, ಸಿಸ್ಟರ್ ಆಶಾ, ಡಿಬಿ ಸ್ನೇಹಾಲಯದ ಸಿಸ್ಟರ್ ಸುಪೀರಿಯರ್ ಮತ್ತು ಮಕ್ಕಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಸ್ವಾಗತ ಭಾಷಣ ಮತ್ತು ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ನಂತರ ಸಕಾರಾತ್ಮಕ ಪೋಷಣೆ ಕುರಿತ ಕಿರುಚಿತ್ರವನ್ನು ಪ್ರದರ್ಶಿಸಲಾಯಿತು. ನವದೆಹಲಿಯ ಡಿಬಿ ಆಶಾಲಯಮ್ ಮತ್ತು ಸ್ನೇಹಾಲಯದ ಮಕ್ಕಳು, "ನಮ್ಮ ಭರವಸೆಯನ್ನು ಎತ್ತಿಹಿಡಿಯೋಣ-ನಮ್ಮ ಕನಸುಗಳನ್ನು ಅನಾವರಣಗೊಳಿಸೋಣ", ಎಂಬ ಶೀರ್ಷಿಕೆಯ ನಾಟಕವನ್ನು ಪ್ರಸ್ತುತಪಡಿಸಿದರು. ಈ ಕಾರ್ಯಕ್ರಮದಲ್ಲಿ ಮಕ್ಕಳಿಂದ ನೃತ್ಯ ಪ್ರದರ್ಶನ, ಕವನ ವಾಚನಗಳು ಇದ್ದವು. ಶ್ರೀ ವಿಲಿಯಮ್ ರವರು ಹಿಂದಿನ ವರ್ಷದ ಅಭಿಯಾನದ ಮುಖ್ಯಾಂಶಗಳನ್ನು ಹಂಚಿಕೊಂಡರು. ಶ್ರೀಮತಿ ವಿಜಯಲಕ್ಷ್ಮಿ ಅರೋರಾ ಮತ್ತು ಇತರ ಗಣ್ಯರು 2025-26ರ ಅಭಿಯಾನ "ನಮ್ಮ ಭರವಸೆಯನ್ನು ಎತ್ತಿಹಿಡಿಯೋಣ-ನಮ್ಮ ಕನಸುಗಳನ್ನು ಅನಾವರಣಗೊಳಿಸೋಣ" ದ ಪೋಸ್ಟರನ್ನು ಅನಾವರಣಗೊಳಿಸಿದರು. ಫಾ. ಜೋ ಪ್ರಭು ಈ ವರ್ಷದ ಅಭಿಯಾನವನ್ನು ಪ್ರತಿಬಿಂಬಿಸುವ ಸಂದೇಶ ನೀಡಿದರು.

YaR ದಿನದ ಅಂಗವಾಗಿ ಬೊಸ್ಕೊ ಯುವೋದಯ, ಯುವಕೇಂದ್ರ, ನಿಲಯ, ನಿವಾಸ್, ಯುವಸ್ಪಂದನ, ಸುಮ್ಮನಹಳ್ಳಿ, ರೇನ್ಬೋ ಹೋಮ್, ವಾತ್ಸಲ್ಯ ಭವನ, ಮನೆ ಮತ್ತು ಸೇರಿದಂತೆ ಎಲ್ಲ ಕೇದ್ರಗಳ ಮಕ್ಕಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಬೆಂಗಳೂರು ಸೆಂಟ್ರಲ್ ವಿಭಾಗದ ಡಿಸಿಪಿಒ ಶ್ರೀಮತಿ ಲೀನಾ ಕಲ್ಲಮ್ಮನವರ್ ಅವರ ಸಮ್ಮುಖದಲ್ಲಿ ಸರ್ಕಾರಿ ಬಾಲಕರ ಬಾಲಮಂದಿರದ ಮಕ್ಕಳಿಗಾಗಿ ಬೊಸ್ಕೊ ನಿವಾಸ್ ತಂಡವು ಜಾಗೃತಿ ಕಾರ್ಯಕ್ರಮವನ್ನು ನಡೆಸಿತು. ಈ ಸಂದರ್ಭದಲ್ಲಿ ಮಕ್ಕಳಿಗೆ ಭಿತ್ತಿಚಿತ್ರ ತಯಾರಿಕೆ, ಚಿತ್ರಕಲೆ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ಕೇಂದ್ರಗಳ ಸಿಬ್ಬಂದಿ ಮತ್ತು ಮಕ್ಕಳು YaR ದಿನದ ಆನ್ಲೈನ್ ಸಭೆಯಲ್ಲಿ ಭಾಗವಹಿಸಿದ್ದರು.

# ಬೀದಿ ಸನ್ನಿಧಿ (ರಕ್ಷಣೆ ಮತ್ತು ಪುನರ್ವಸತಿ)



ಬೊಸ್ಕೊ ನಿವಾಸ್: ವಯಸ್ಕ ಬಾಲಕಿಯರಿಗೆ ಜಾಗೃತಿ ಕಾರ್ಯಕ್ರಮ



ಬೊಸ್ಕೊ ನಿಲಯ: ಆನಂದಪುರಮ್ ಅಧ್ಯಯನ ಕೇಂದ್ರದ ಉದ್ಘಾಟನೆ



ಎ ಆರ್ ಎಸ್ ಪಿ: ಸಾರ್ವಜನಿಕ ಜಾಗೃತಿ



ಬಸ್ ನಿಲ್ದಾಣ: ಮಂಗಳಮುಖಿಯರ ಜಾಗೃತಿ



ಮಾಗಡಿ ರಸ್ತೆ: ಶಾಲಾ ಜಾಗೃತಿ ಕಾರ್ಯಕ್ರಮ



ಗಾಂಧಿನಗರ ಪ್ರದೇಶ: ಆಶಾ ಕಾರ್ಯಕರ್ತೆಯರಿಗೆ ಜಾಗೃತಿ ಕಾರ್ಯಕ್ರಮ

# ಘಟಕಗಳು



ಸಿ. ಎಸ್. ಎನ್: ಪಾಲುದಾರರ ಜಾಗೃತಿ



ಪೋಷಕತ್ವ ಕಾರ್ಯಕ್ರಮ: ಕರ್ನಾಟಕದಲ್ಲಿ ಮಕ್ಕಳಿಗೆ ಕುಟುಂಬ ಆಧಾರಿತ ಪಾಲನೆ ಮತ್ತು ಪೋಷಣೆ ಕುರಿತು ರಾಜ್ಯಮಟ್ಟದ ಸಮಾಲೋಚನಾ ಸಭೆಯಲ್ಲಿ ಬೊಸ್ಕೊ ತಂಡದ ಭಾಗಹಹಿಸುವಿಕೆ



ಮಾನವ ಸಂಪನ್ಮೂಲ ಅಭಿವೃದ್ಧಿ: ಮಾಹಿತಿ/ ಅರಿವು ನೀಡುವ ಕಾರ್ಯಕ್ರಮ




ಆರೋಗ್ಯ ರಕ್ಷಣಾ ಕಾರ್ಯಕ್ರಮ: ಸಾಮಾನ್ಯ ಆರೋಗ್ಯ ಶಿಬಿರ



ಕುಟುಂಬ ಪುನಃಸ್ಥಾಪನೆ ಮತ್ತು ನಂತರದ ಆರೈಕೆ: ಮನೆ ಭೇಟಿ



ವಲಸಿಗರ ಸಹಾಯ ಕೇಂದ್ರ: ಮನರಂಜನಾ ಕಾರ್ಯಕ್ರಮ



ಸಿ ಆರ್ ಐ ಎಸ್ ಪಿ: ಆಧಾರ್ ನೋಂದಣಿ ಶಿಬಿರ

# ಮಕ್ಕಳ ಆರೈಕೆ ಸಂಸ್ಥೆಗಳು



ಬೊಸ್ಕೊ ಮನೆ: ಮಕ್ಕಳ ಸಭೆ



ಬೊಸ್ಕೊ ವಿಕಾಸ್: ಎಐ ಬಗ್ಗೆ ಅರಿವು ಕಾರ್ಯಕ್ರಮ



ಬೊಸ್ಕೊ ರೇನ್ಬೋ ಹೋಮ್: ವರಮಹಾಲಕ್ಷ್ಮಿ ಹಬ್ಬ ಆಚರಣೆ



ಬೊಸ್ಕೊ ವಾತ್ಸಲ್ಯಭವನ: ಗೌರಿ ಹಬ್ಬದ ಆಚರಣೆ



ಬೊಸ್ಕೊ ಸುಮ್ಮನಹಳ್ಳಿ: ಲಾಲ್ ಬಾಗ್ ಉದ್ಯಾನವನಕ್ಕೆ ಭೇಟಿ



ಬೊಸ್ಕೊ ಯುವಕೇಂದ್ರ: ಗಣೇಶ ಹಬ್ಬದ ಆಚರಣೆ



ಬೊಸ್ಕೊ ಯುವೋದಯ: ವಿಧಾನ ಸೌಧಾ, ಬಾಲಭವನ ಮತ್ತು ಕಬ್ಬನ್ ಪಾರ್ಕಗೆ ಭೇಟಿ

# HOMELINK NETWORK

| | Male | Female | Total |
|---|---|---|---|
| Children rescued | 78 | 10 | 88 |
| Service provided | 42 | 07 | 49 |
| Grand Total | 120 | 17 | 137 |

New Children Data of Contact Centre/Area:

| | Fresh | | Repeated | | |
|---|---|---|---|---|---|
| Contact Point | Boys | Girls | Boys | Girls | Total |
| Railway Station DCPU Staff | 03 | 00 | 00 | 00 | 03 |
| Bus Stand BMTC | 09 | 01 | 01 | 00 | 11 |
| Bus Stand KSRTC | 07 | 00 | 00 | 00 | 07 |
| BOSCO Yuvodaya | 01 | 00 | 00 | 00 | 01 |
| BOSCO Yuvakendra | 04 | 00 | 00 | 00 | 04 |
| BOSCO Sumanahalli | 11 | 00 | 00 | 00 | 11 |
| BOSCO Mane | 01 | 00 | 00 | 00 | 01 |
| BOSCO Nivas | 02 | 00 | 00 | 00 | 02 |
| BOSCO Nilaya | 04 | 00 | 00 | 00 | 04 |
| CSN | 02 | 00 | 00 | 00 | 02 |
| ARSP | 33 | 09 | 00 | 00 | 42 |
| TOTAL | 77 | 10 | 01 | 00 | 88 |

Final Action based on Contact date:

| Placement | Boys | Girls | Total |
|---|---|---|---|
| Under follow-up in BOSCO Centres | 18 | 00 | 18 |
| Home Placement | 52 | 10 | 62 |
| Admission to Gov't Homes | 04 | 00 | 04 |
| Handed over to DCPU/1098 | 02 | 00 | 02 |
| Counseled and Sent/ Went off | 02 | 00 | 02 |
| Data is not available | 00 | 00 | 00 |
| TOTAL | 78 | 10 | 88 |